**ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಆರ್ ಆರ್., ವಾದಿ ಪರ ವಕೀಲರಿಂದ**

2. ವಾದಿ ಕೃಷ್ಣಮೂರ್ತಿ ನನಗೆ ಈ ದಾವೆಯನ್ನು ದಾಖಲಿಸುವ 10 ವರ್ಷಗಳ ಮೊದಲಿನಿಂದ ಪರಿಚಯ ಇರುತ್ತಾರೆ. ವಾದಿ ಕೃಷ್ಣಮೂರ್ತಿ ನನಗೆ ಯಾವ ರೀತಿ ಪರಿಚಯ ಎಂದರೆ ಸಾಕ್ಷಿಯೂ ಅವರ ಸರ್ವೇ ನಂ. 25 ರಲ್ಲಿ 7 ಎಕರೆ ಜಮೀನಿನ ವ್ಯವಸಾಯದ ಚಟುವಟಿಕೆಯನ್ನು ನಾನು ನೋಡಿಕೊಳ್ಳುತ್ತಿದ್ದುದರಿಂದ ಪರಿಚಯ ಇರುತ್ತಾರೆ. ನಾನು ವ್ಯವಸಾಯ ಮಾಡುತ್ತಿದ್ದಾಗ ಗೋಪಿನಾಥ್ ಹೆಸರಿನಲ್ಲಿ ನಮೂದು ಇತ್ತು. ಸಾಕ್ಷಿಯೂ ಮುಂದುವರೆದು ಗೋಪಿನಾಥ್ ಹಾಗೂ ಕೃಷ್ಣಮೂರ್ತಿ ಅವರಿಬ್ಬರು ಪಾರ್ಟನರ್ಸ್ ಎಂದು ನುಡಿಯುತ್ತಾರೆ. ಗೋಪಿನಾಥ್ ಹಾಗೂ ಕೃಷ್ಣಮೂರ್ತಿ ಅವರಿಬ್ಬರು ಸ್ನೇಹಿತರು. ಅವರಿಬ್ಬರು ಪಾರ್ಟನರ್ಸ್ ಎಂದು ನನಗೆ ಕೃಷ್ಣಮೂರ್ತಿ ರವರು ತಿಳಿಸಿರುತ್ತಾರೆ. ಅವರಿಬ್ಬರು ನನಗೆ ವ್ಯವಸಾಯ ಮಾಡಲು ಕೇಳಿಕೊಂಡಿದ್ದು, ಅರ್ಧ ನನಗೆ ಇಟ್ಟುಕೊಂಡು ಅರ್ಧ ಅವರಿಗೆ ಕೊಡಬೇಕಾಗಿ ನಮ್ಮಲ್ಲಿ ಒಪ್ಪಂದವಿತ್ತು. ಈ ಬಗ್ಗೆ ನಮ್ಮ ನಡುವೆ ಯಾವುದೇ ದಾಖಲೆಗಳನ್ನು ಬರೆದುಕೊಂಡಿರುವುದಿಲ್ಲ. ಅವರ ಜಮೀನಿನಲ್ಲಿ ನಾನು ವ್ಯವಸಾಯ ಮಾಡುವಂತ ಸಮಯದಲ್ಲಿ ಪಕ್ಕದಲ್ಲಿ ನನ್ನ ಜಮೀನು ಇರಲಿಲ್ಲ. ಸಾಕ್ಷಿಯೂ ಮುಂದುವರೆದು ನನ್ನ ಅಣ್ಣನ ಜಮೀನು ಇತ್ತು ಎಂದು ನುಡಿಯುತ್ತಾರೆ.

3. ಸರ್ವೇ ನಂ. 25 ರಲ್ಲಿ 7 ಎಕರೆ ಜಮೀನಿನಲ್ಲಿ ನಾನು ವ್ಯವಸಾಯ ಮಾಡುವಂತೆ ವಾದಿ ಕೃಷ್ಣಮೂರ್ತಿ ಆಗಲಿ ಅಥವಾ ಗೋಪಿನಾಥ್ ಆಗಲಿ ನನ್ನನ್ನು ಕೇಳಿಕೊಂಡಿರುವುದಿಲ್ಲ ಹಾಗೂ ಎಂದಿಗೂ ಸದರಿ ಜಮೀನಿನಲ್ಲಿ ನಾನು ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ಗೋಪಿನಾಥ್ ರವರು ತಮ್ಮ ಜಮೀನಿನಲ್ಲಿ ಕೂಲಿ ಆಳುಗಳ ಮುಖಾಂತರ ವ್ಯವಸಾಯ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ.

4. ದಾವಾ ಸರ್ವೇ ನಂ. 25 ರಲ್ಲಿ 15 ಎಕರೆ ಜಮೀನು ಇರುತ್ತದೆ. ಸರ್ವೇ ನಂ. 25 ರ 15 ಎಕರೆ ಜಮೀನು ಮೂಲತಃ ಪಿ.ಎಲ್. ಅನಂತಯ್ಯಶೆಟ್ಟಿ ರವರಿಗೆ ಸೇರಿತ್ತು. ಸರ್ವೇ ನಂ. 25 ರಲ್ಲಿ 7 ಎಕರೆ ಜಮೀನಿಗೆ ಸಂಬಂದಿಸಿದಂತೆ ಗೋಪಿನಾಥ್ ರವರಿಗೆ ಪಿ.ಎಲ್. ಅನಂತಯ್ಯಶೆಟ್ಟಿ ಹಾಗೂ ಅವರ ಮಕ್ಕಳು ಕ್ರಯ ದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, ಅವರಲ್ಲಿ ವ್ಯಾಜ್ಯ ಉಂಟಾಗಿ ಅಮಲುಜಾರಿ ಅರ್ಜಿ ಸಲ್ಲಿಸಿ ನ್ಯಾಯಾಲಯದ ಆದೇಶದಂತೆ ಗೋಪಿನಾಥ್ ರವರಿಗೆ ಕ್ರಯ ಪತ್ರ ನೊಂದಣಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

5. ಸರ್ವೇ ನಂ. 25 ರಲ್ಲಿ ಮಾರಾಟ ಮಾಡಿ ಉಳಿದ 8 ಎಕರೆ ಜಮೀನು ಪಿ.ಎಲ್. ಅನಂತಯ್ಯಶೆಟ್ಟಿ ರವರ ಹೆಸರಿನಲ್ಲಿ ನಮೂದು ಇತ್ತು ಎಂದರೆ ಸರಿ. ಸದರಿ 8 ಎಕರೆ ಜಮೀನನ್ನು ಪಿ.ಎಲ್. ಅನಂತಯ್ಯಶೆಟ್ಟಿ ರವರು ಕೋಲಾರ ಗ್ರಾಮೀಣ ಬ್ಯಾಂಕಿನಲ್ಲಿ ಅಡಮಾನ ಮಾಡಿ ಸಾಲ ಪಡೆದಿದ್ದು, ಅವರು ಸಾಲ ಮರುಪಾವತಿಸದೇ ಇದ್ದ ಕಾರಣಕ್ಕೆ ಬ್ಯಾಂಕಿನವರು ಒಟ್ಟು 8 ಎಕರೆ ಜಮೀನನ್ನು ಹರಾಜು ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಹರಾಜು ಪ್ರಕ್ರಿಯೇ ಯಲ್ಲಿ ನಾನು ಕೂಡ ಭಾಗವಹಿಸಿದ್ದೆ ಎಂದರೆ ಸರಿ. ಸದರಿ ಹರಾಜು ಪ್ರಕ್ರಿಯೇ ನಾನು ಅತಿ ಹೆಚ್ಚು ಹರಾಜಿಗೆ ಕೂಗಿದ್ದೆ ಎಂದರೆ ಸರಿ. ಸದರಿ ಹರಾಜು ಪ್ರಕ್ರಿಯೆಗೆ ಹಣವನ್ನು ಕಟ್ಟಲು ನಾನು ವಾದಿ ಕೃಷ್ಣಮೂರ್ತಿ ರವರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರೆದು ದೊಡ್ಡಬಳ್ಳಾಪುರ ದ ಆರ್.ಬಿ.ಎಲ್ ಬ್ಯಾಂಕಿನಿಂದ ಸಾಲ ಪಡೆದಿದ್ದೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕಿನಲ್ಲಿ ಸಾಲ ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ದಿ. 06.11.2014 ರಂದು ಮೇಲೆ ಹೇಳಿದ ಆರ್.ಬಿ.ಎಲ್ ಬ್ಯಾಂಕಿನಿಂದ ಸಾಲ ಪಡೆದಿದ್ದೆನು. ಸದರಿ ಸಾಲ ಪಡೆಯುವಾಗ ನಾನು ನನ್ನ ಹೆಸರಿನಲ್ಲಿದ್ದ ಸರ್ವೇ ನಂ. 80/1, 81/2, 1 ಸೈಟ್ ಹಾಗೂ ಇನ್ನೊಂದು 6 ಗುಂಟೆ ಇದ್ದ ಜಮೀನುಗಳನ್ನು ಅಡಮಾನ ಮಾಡಿದ್ದೇನು.ಸದರಿ ಜಮೀನುಗಳು ಕಾಡುಕಚ್ಚನಹಳ್ಳಿ ಹಾಗೂ ಸೈಟ್ ಮುಳಬಾಗಿಲು ಪಟ್ಟಣದ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಹೇಳುವಂತೆ ಜಮೀನುಗಳನ್ನು ಅಡಮಾನ ಮಾಡಿರುವುದಿಲ್ಲ ಕೇವಲ ಮುಳಬಾಗಿಲು ಪಟ್ಟಣದ ಸೈಟ್ ನ್ನು ಮಾತ್ರ ಅಡಮಾನ ಮಾಡಿದ್ದೆ ಎಂದರೆ ಸರಿಯಲ್ಲ. ಜಮೀನುಗಳನ್ನು ಅಡಮಾನ ಮಾಡಿದ್ದ ಬಗ್ಗೆ ಅಡಮಾನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಅದನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

6. ನಾನು ಬ್ಯಾಂಕಿನಿಂದ ಪಡೆದಿದ್ದ ಸಾಲದ ಮೊತ್ತವನ್ನು ನನ್ನ ಜಮೀನಿನಲ್ಲಿ ಹಸಿರು ಮನೆ ನಿರ್ಮಿಸಲು ಹಾಗೂ ಹರಾಜಿನಲ್ಲಿ ಭಾಗವಹಿಸಿದ ಜಮೀನಿಗೆ ಹಣ ಕಟ್ಟಲು ಉಪಯೋಗಿಸಿಕೊಂಡಿರುತ್ತೇನೆ. ನಾನು ವಾದಿ ಕೃಷ್ಣಮೂರ್ತಿಯಿಂದ ಎಂದಿಗೂ ಸಾಲವನ್ನು ಪಡೆದಿರುವುದಿಲ್ಲ. ವಾದಿ ಕೃಷ್ಣಮೂರ್ತಿ ಬಳಿ ಹೋಗಿ ನಾನು 30 ಲಕ್ಷ ಹಣ ಸಾಲ ಕೇಳಿದ್ದು ಆಗ ವಾದಿ ಕೃಷ್ಣಮೂರ್ತಿ ರವರು ಹರಾಜು ಪ್ರಕ್ರಿಯೇಯ 8 ಎಕರೆ ಜಮೀನಿನ ಪೈಕಿ 4 ಎಕರೆ ಜಮೀನನ್ನು ತನಗೆ ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಪತ್ರ ಬರೆದುಕೊಟ್ಟರೆ 20 ಲಕ್ಷ ಕೊಡುತ್ತೇನೆಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಒಪ್ಪಿಕೊಂಡು ವಾದಿ ಕೃಷ್ಣಮೂರ್ತಿಗೆ ನಿಪಿ-1 ರ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟು ಅವರಿಂದ 19 ಲಕ್ಷ ರೂಪಾಯಿಗಳನ್ನು ಸಾಕ್ಷಿಗಳ ಸಮಕ್ಷಮ ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ.

7. ಸಾಕ್ಷಿಗೆ ಈಗ ನಿಪಿ–1ರ ಮೊದಲನೇ ಮತ್ತು 2 ನೇ ಪುಟದಲ್ಲಿರುವ ಸಹಿಗಳನ್ನು ತೋರಿಸಲಾಗಿ ಸಾಕ್ಷಿಯೂ ಅದು ತನ್ನದು ಎಂದು ಒಪ್ಪಿಕೊಂಡು, ಆದರೆ ಸದರಿ ಸಹಿಗಳನ್ನು ನಾನು ಶ್ರೀನಿವಾಸ್ ಎಂಬುವವರಿಗಂದ 1 ಲಕ್ಷ ಸಾಲ ಪಡೆದಾಗ ಅದರ ಭದ್ರತೆಗಾಗಿ ನಿಪಿ–1 ರ ಪತ್ರಕ್ಕೆ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಯೂ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳ ಪೈಕಿ 1 ನೇ ಮೊದಲನೇ ಪುಟದಲ್ಲಿರುವ ಸಹಿಯನ್ನು ನಿಪಿ–1(ಎಫ್)ಎಂದು ಗುರುತಿಸಲಾಯಿತು, ಹಾಗೂ 2 ನೇ ಪುಟದ ಸಹಿಯನ್ನು ಈಗಾಗಲೇ ನಿಪಿ–1(ಬಿ) ಎಂದು ಗುರುತಿಸಲಾಗಿರುತ್ತದೆ.

8. ನಾನು ಹೇಳುವಂತೆ ಶ್ರೀನಿವಾಸ್ ರವರಿಂದ 1 ಲಕ್ಷ ಸಾಲ ಪಡೆದಿರುವುದಿಲ್ಲ ಹೊರತು ವಾದಿ ಕೃಷ್ಣಮೂರ್ತಿಗೆ 4 ಎಕರೆ ಜಮೀನಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟು ನಿಪಿ–1(ಎಫ್ ಮತ್ತು ಬಿ) ನೇದ್ದರ ಸಹಿಗಳನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ–1 ರ ಎಲ್ಲಾ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ–1 ಕ್ರಯದ ಕರಾರು ಪತ್ರವನ್ನು ಬರೆಯಲು ಉಪಯೋಗಿಸಿರುವ ಬಾಂಡ್ ಪತ್ರವನ್ನು ನಾನೇ ತಂದಿದ್ದೇನೆಂದರೆ ಸಾಕ್ಷಿಯೂ ಶ್ರೀನಿವಾಸ್ ತಂದಿದ್ದರು ಎಂದು ನುಡಿಯುತ್ತಾರೆ. ಶ್ರೀನಿವಾಸ್ ಬಾಂಡ್ ಪೇಪರ್ ಖರೀದಿಸುವಾಗ ನಾನು ಕೂಡ ಅವರೊಂದಿಗೆ ಇದ್ದೆನು. ಆ ಸಮಯದಲ್ಲಿ ನಾವಿಬ್ಬರು ಮಾತ್ರ ಇದ್ದು, ಬೇರೆ ಯಾರು ಇದ್ದರೂ ಎಂದು ನನಗೆ ಗೊತ್ತಿಲ್ಲ. ನಾನೇ ಬಾಂಡ್ ಪತ್ರವನ್ನು ಖರೀದಿಸಿದ್ದು ಆದರೆ ಉದ್ದೇಶಪೂರಕವಾಗಿ ಸೆಕೆಂಡ್ ಪಾರ್ಟಿ ಎಂದು ಬರೆಯುವ ಜಾಗದಲ್ಲಿ ವಾದಿ ಕೃಷ್ಣಮೂರ್ತಿಯ ಹೆಸರಿನ ಬದಲಾಗಿ ಶ್ರೀನಿವಾಸ್ ರವರ ಹೆಸರನ್ನು ಹೇಳಿ ಬರೆಸಿರುತ್ತೆನೆಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.